# ನಿಮ್ಮೊಡನೆ

## ಬೆತ್ತಲಾಗಿಸುವ ತಂತ್ರಜ್ಞಾನದ ಸವಾಲಿಗೆ ಉತ್ತರ ಕಾನೂನಿನೊಂದಿಗೆ ಮನಸ್ಸುಗಳೂ ಗಟ್ಟಿಯಾಗಬೇಕು

ಚಾರಿತ್ರ್ಯಕ್ಕೆ ಕುಂದು ತರುವ ಘಟನೆಗಳು ನಡೆದಾಗ ಅವುಗಳನ್ನು ಎದುರಿಸುವುದು ಹೇಗೆ ಎನ್ನುವುದರ ತಿಳಿವಳಿಕೆಯನ್ನು ಮಕ್ಕಳಿಗೆ ನೀಡಬೇಕಾಗಿದೆ. ಚಾರಿತ್ರ್ಯಹನನ ಮಾಡಲು ಹೊರಟವರು, ಆ ಮೂಲಕ ತಾವೇ ಬೆತ್ತಲಾಗಿರುತ್ತಾರೆ ಎನ್ನುವುದನ್ನು ಎಲ್ಲರೂ ಅರಿಯಬೇಕಾಗಿದೆ.

ಸತ್ಯದ ತಲೆಯ ಮೇಲೆ ಸುಳ್ಳು ಸವಾರಿ ನಡೆಸುತ್ತದೆ ಎನ್ನುವ ಮಾತಿಗೆ 'ಡೀಪ್‌ಫೇಕ್' ತಂತ್ರಜ್ಞಾನ ಬಳಸಿ ರೂಪುಗೊಂಡಿರುವ ವಿಡಿಯೊಗಳೂ ಹೊಸ ಉದಾಹರಣೆಯಂತಿವೆ. ಯಾರದೋ ಮುಖಕ್ಕೆ ಯಾರದೋ ದೇಹವನ್ನು ಹೊಂದಿಸಿ ರೂಪುಗೊಳ್ಳುವ ಈ ವಿಡಿಯೊಗಳು ಪುರುಷಪ್ರಧಾನ ಸಮಾಜದ ವಿಕೃತಿಗಳನ್ನು ತಂತ್ರಜ್ಞಾನಕ್ಕೂ ಆರೋಪಿಸುವಂತಿವೆ. ಡೀಪ್‌ಫೇಕ್ ತಂತ್ರಜ್ಞಾನ ಬಳಸಿ ಮಹಿಳೆಯರ ಅಸಭ್ಯ ವಿಡಿಯೊಗಳನ್ನು ತಯಾರಿಸಿ ಜಾಲತಾಣಗಳಲ್ಲಿ ಹರಿಬಿಡುವುದು, ವ್ಯಸನ ಮತ್ತು ಉದ್ಯಮದ ಸ್ವರೂಪ ಪಡೆದಂತಿದೆ. ಮಹಿಳೆಯರ ಚಾರಿತ್ರ್ಯಹನನವನ್ನೇ ಈ ವಿಡಿಯೊಗಳು ಗುರಿಯಾಗಿಸಿಕೊಂಡಿವೆ; ಸ್ತ್ರೀ ಶೋಷಣೆಯ ಭಾಗವಾಗಿ ಈಗ ಯಾಂತ್ರಿಕ ಬುದ್ಧಿಮತ್ತೆಯೂ ಸೇರಿಕೊಂಡಿದೆ ಎನ್ನುವ ಭಾವನೆ ಉಂಟುಮಾಡುವಂತಿವೆ. ಯೂರೋಪ್, ಅಮೆರಿಕಗಳಲ್ಲಿನ ಈ ಪಿಡುಗು ಈಗ ನಮ್ಮ ಅಂಗಳಕ್ಕೂ ಕಾಲಿಟ್ಟಿರುವುದು ಕಳವಳಕಾರಿ.

ನಟಿ ರಶ್ಮಿಕಾ ಮಂದಣ್ಣನವರ ಡೀಪ್‌ಫೇಕ್ ವಿಡಿಯೊವೊಂದು ಇತ್ತೀಚೆಗಷ್ಟೇ ಜನರ ಗಮನಸೆಳೆದಿದೆ ಹಾಗೂ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಈ ವಿಡಿಯೊ ಬಗ್ಗೆ ಕೆಲವರಾದರೂ ಆತಂಕ–ಕಳವಳ ವ್ಯಕ್ತಪಡಿಸಿದ್ದಾರೆ. 'ಡೀಪ್‌ಫೇಕ್ ತಂತ್ರಜ್ಞಾನ ಅಪಾಯಕಾರಿಯಾದ ತಪ್ಪು ಮಾಹಿತಿ ಹೊಂದಿರುತ್ತದೆ' ಎಂದು ಅಭಿಪ್ರಾಯಪಟ್ಟಿರುವ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವರು, ತಪ್ಪು ಮಾಹಿತಿಗಳು ವರದಿಯಾದ ನಂತರವೂ ಅವುಗಳನ್ನು 36 ಗಂಟೆಗಳೊಳಗಾಗಿ ತೆಗೆದುಹಾಕದ ಡಿಜಿಟಲ್ ವೇದಿಕೆಗಳನ್ನು ಬಾಧಿತ ವ್ಯಕ್ತಿ ನ್ಯಾಯಾಲಯಕ್ಕೆಳೆಯುವ ಅವಕಾಶ ಇರುವುದಾಗಿ ಹೇಳಿದ್ದಾರೆ. ಇಂಥ ಬಾಯಿಮಾತಿನ ಎಚ್ಚರಿಕೆ ಅಥವಾ ಕಳವಳಗಳಿಂದ ಯಾವ ಉಪಯೋಗವೂ ಇಲ್ಲ. ಡೀಪ್‌ಫೇಕ್ ವಿಡಿಯೊ ಸೃಷ್ಟಿಸಿದವರು ಹಾಗೂ ಅಂಥ ವಿಡಿಯೊಗಳನ್ನು ಹಂಚಿಕೊಳ್ಳುವವರನ್ನು ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ದಂಡನೆಗೊಳಪಡಿಸುವುದಕ್ಕೆ ಅವಕಾಶವಿದೆ. ಖಾಸಗಿತನದ ಹಕ್ಕಿನ ಉಲ್ಲಂಘನೆ, ವಂಚನೆ, ಮಾನಹಾನಿ ಪ್ರಕರಣಗಳಲ್ಲಿ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲೂ ಅವಕಾಶವಿದೆ. ಆದರೆ, ಈ ಕಾನೂನುಗಳು ವಿಷವಿಲ್ಲದ ಹಾವಿನಂತೆ ಬಳಕೆಯಲ್ಲಿವೆ. ತಂತ್ರಜ್ಞಾನವನ್ನು ದುರುಪಯೋಗ ಮಾಡಿಕೊಳ್ಳುವವರನ್ನು ಪತ್ತೆಹಚ್ಚುವ ಹಾಗೂ ಕಾನೂನುಕ್ರಮಕ್ಕೊಳಪಡಿಸುವ ಸಮರ್ಪಕ ವ್ಯವಸ್ಥೆ ನಮ್ಮಲ್ಲಿ ರೂಪುಗೊಂಡಿಲ್ಲ. ಯಾಂತ್ರಿಕ ಬುದ್ಧಿಮತ್ತೆಯೂ ಸೇರಿದಂತೆ ತಂತ್ರಜ್ಞಾನದಿಂದ ಉಂಟಾಗಬಹುದಾದ ಸಮಸ್ಯೆಗಳನ್ನು ಎದುರಿಸಲು ಅಗತ್ಯವಾದ ಸ್ಪಷ್ಟ ಕಾನೂನು ರೂಪಿಸಬೇಕಾದ ತುರ್ತು ಇಂದಿನದು.

ಡೀಪ್‌ಫೇಕ್ ವಿಡಿಯೊದ ಬಗ್ಗೆ ರಶ್ಮಿಕಾ ಮಂದಣ್ಣ ಅವರು ನೀಡಿರುವ ಪ್ರತಿಕ್ರಿಯೆಯಲ್ಲಿ ನಾವೆಲ್ಲ ಯೋಚಿಸಬೇಕಾದ ಸಂಗತಿಯೊಂದಿದೆ. ಡೀಪ್‌ಫೇಕ್ ವಿಡಿಯೊದಿಂದ ತೀವ್ರವಾಗಿ ಗಾಸಿಗೊಂಡಿರುವುದಾಗಿ ಹೇಳಿರುವ ಅವರು, 'ನಾನು ಶಾಲೆಯಲ್ಲೋ ಕಾಲೇಜಿನಲ್ಲೋ ಇದ್ದಾಗ ಇಂಥ ಸಮಸ್ಯೆ ಎದುರಾಗಿದ್ದರೆ, ಅದನ್ನು ಹೇಗೆ ಎದುರಿಸುತ್ತಿದ್ದೆ ಎನ್ನುವುದನ್ನು ಊಹಿಸಿಕೊಳ್ಳುವುದೂ ಕಷ್ಟ' ಎಂದು ಸಮಸ್ಯೆಯ ಮತ್ತೊಂದು ಆಯಾಮದತ್ತ ಗಮನಸೆಳೆದಿದ್ದಾರೆ. ಜನಪ್ರಿಯ ನಟಿಯೊಬ್ಬಳು ಇಂಥ ಘಟನೆಯನ್ನು ಅರಗಿಸಿಕೊಳ್ಳುವುದು ಕಷ್ಟವಾಗಿರುವಾಗ, ಸಾಮಾನ್ಯ ಹೆಣ್ಣುಮಕ್ಕಳು ಇಂಥ ವಿದ್ಯಮಾನಗಳನ್ನು ಎದುರಿಸುವುದು ಹೇಗೆ? ವಿವಿಧ ಸಾಮಾಜಿಕ ನಿರ್ಬಂಧಗಳ ನಡುವೆ ಬಾಳಬೇಕಾದ ಹೆಣ್ಣುಮಕ್ಕಳು, ಡೀಪ್‌ಫೇಕ್ ವಿಡಿಯೊಗಳಿಗೆ ಮಿಕವಾದರೆ, ಅವರ ಬದುಕು ಅಸಹನೀಯಗೊಳ್ಳುವುದರಲ್ಲಿ ಅನುಮಾನವಿಲ್ಲ. ಡೀಪ್‌ಫೇಕ್ ವಿಡಿಯೊಗಳು ಈಗ ಸೆಲೆಬ್ರಿಟಿಗಳಿಗಷ್ಟೇ ಸೀಮಿತವಾಗಿಲ್ಲ. ಅವು ಕೊಳಕು ರಾಜಕಾರಣದ ಭಾಗವಾಗಿರುವಂತೆ ಹಾಗೂ ಹಣ ಗಳಿಸುವ ದಂಧೆಯಾಗಿರುವಂತೆ, ವಿಕೃತ ಮನಸ್ಥಿತಿಯ ಅಭಿವ್ಯಕ್ತಿಯೂ ಆಗಿವೆ. ಮಹಿಳೆಯರ ಭಾವಚಿತ್ರಗಳನ್ನು ಬಳಸಿಕೊಂಡು ಅಶ್ಲೀಲ ಚಿತ್ರ–ವಿಡಿಯೊಗಳನ್ನು ರೂಪಿಸುವ ದೊಡ್ಡದೊಂದು ದಂಧೆ ಚಾಲ್ತಿಯಲ್ಲಿದೆ. ಯಾಂತ್ರಿಕ ಬುದ್ಧಿಮತ್ತೆ ಬೆರಳ ತುದಿಗೆ ಬಂದಿರುವ ಸಂದರ್ಭದಲ್ಲಿ ಈ ಕೊಳಕುತನ ಸರ್ವವ್ಯಾಪಿ ಎನ್ನುವಂತಾಗಿದೆ. ಬ್ಲ್ಯಾಕ್‌ಮೇಲ್ ಮಾಡಲು, ಹಣ ಸುಲಿಯಲು, ಹೆಣ್ಣನ್ನು ತಮ್ಮ ನಿಯಂತ್ರಣದಲ್ಲಿ ಇರಿಸಿಕೊಳ್ಳಲು ಅಶ್ಲೀಲ ಚಿತ್ರಗಳನ್ನು ತಯಾರಿಸಲಾಗುತ್ತಿದೆ. ಸಂಗಾತಿಯನ್ನು ನಿಯಂತ್ರಿಸಲು ಅಶ್ಲೀಲ ಚಿತ್ರಿಕೆಗಳನ್ನು ಬಳಸಿರುವ ವಿವಾಹಿತರೂ ಇದ್ದಾರೆ. ಚಪಲಕ್ಕಾಗಿ, ವಿಕೃತಿಗಾಗಿ ತಂತ್ರಜ್ಞಾನ ದುರ್ಬಳಕೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದಾಗಿ, ಮರ್ಯಾದೆಗೆ ಅಂಜುವವರು ಡಿಜಿಟಲ್ ವೇದಿಕೆಗಳಲ್ಲಿ ವ್ಯವಹರಿಸುವುದೇ ಅಪಾಯಕರ ಎಂದು ಯಾರಾದರೂ ಭಾವಿಸಿದರೆ ಆಶ್ಚರ್ಯವೇನಿಲ್ಲ.

ಕಾನೂನನ್ನು ಗಟ್ಟಿಗೊಳಿಸುವುದರ ಜೊತೆಗೆ, ಹೆಣ್ಣುಮಕ್ಕಳನ್ನು ಮಾನಸಿಕವಾಗಿ ಸಶಕ್ತರನ್ನಾಗಿಸುವುದು ಇಂದಿನ ಅಗತ್ಯ. ಈ ಗಟ್ಟಿಗೊಳಿಸುವಿಕೆ ಮನೆಗಳಲ್ಲೂ ಆಗಬೇಕು, ವಿದ್ಯಾಸಂಸ್ಥೆಗಳಲ್ಲೂ ನಡೆಯಬೇಕು. ಚಾರಿತ್ರ್ಯಕ್ಕೆ ಕುಂದು ತರುವ ಘಟನೆಗಳು ನಡೆದಾಗ ಅವುಗಳನ್ನು ಎದುರಿಸುವುದು ಹೇಗೆ ಎನ್ನುವುದರ ತಿಳಿವಳಿಕೆಯನ್ನು ಮಕ್ಕಳಿಗೆ ನೀಡಬೇಕಾಗಿದೆ. ಚಾರಿತ್ರ್ಯಹನನ ಮಾಡಲು ಹೊರಟವರು, ಆ ಮೂಲಕ ತಾವೇ ಬೆತ್ತಲಾಗಿರುತ್ತಾರೆ ಎನ್ನುವುದನ್ನು ಎಲ್ಲರೂ ಅರಿಯಬೇಕಾಗಿದೆ. ಮಾನಸಿಕವಾಗಿ ಸಶಕ್ತರಾಗಿದ್ದಾಗ, ಸೈಬರ್ ಕ್ರಿಮಿಗಳ ವಿರುದ್ಧ ಪ್ರತಿರೋಧ ಗುಣ ಬೆಳೆಯುತ್ತದೆ. ಸಮಾಜ ಕೂಡ ವಿಕೃತ ಖದೀಮರ ಬಗ್ಗೆ ನಿಷ್ಠುರವಾಗಿರಬೇಕು.

■ ರಘುನಾಥ ಚ.ಹ.



ಈಶ್ವರ್